2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ,
ನಂಜನಗೂಡು

**ಸಿ. ಸಿ. ನಂ.ಃ1233/2016**

ಆರೋಪಿಯ ಹೆಸರು ಬಿ.ಎಸ್.ದಿನೇಶ್ ಬಿನ್ ಶಾಂತಪ್ಪ,

ವಾಸ್ತವ್ಯ ಹೌಸ್ ನಂಃ23, ಹೌಸಿಂಗ್ ಬೋರ್ಡ್ ಕ್ವಾರ್ಟರ್ಸ್,
ಮಡಿಕೇರಿ, ಕೊಡಗು ಜಿಲ್ಲೆ.

**ಅ. ಪ್ರ. ಸಂ. ಕಲಂ 313ರನ್ವಯ ಆರೋಪಿಯ ಹೇಳಿಕೆ**

**ಪ್ರಶ್ನೆ 1ಃ** ನೀವು ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

**ಉತ್ತರ ಃ**

**ಪ್ರಶ್ನೆ 2ಃ** ಪ್ರಾಸಾ-1 ಮಧುಸೂದನ್ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಆರೋಪಿಯಾದ ನೀವು ಹಾಗೂ ಪ್ರಾಸಾ-1 ರವರು ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಆರೋಪಿಯಾದ ನೀವು ನಿಮ್ಮ ದರದು ನಿಮಿತ್ತ ಅಂದರೆ ನೀವು ವಾಹನವನ್ನು ಖರೀದಿ ಮಾಡಲು ಹಣದ ಅವಶ್ಯಕತೆಗಾಗಿ ಫಿರ್ಯಾದಿದಾರರನ್ನು ದಿಃ25.12.2013 ರಂದು ಭೇಟಿ ಮಾಡಿ ರೂ.**2,50,000/-** ಗಳನ್ನು ಸಾಲವಾಗಿ ಪಡೆದುಕೊಂಡು, ಸದರಿ ಸಾಲವನ್ನು 02 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 3** ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀವು ಸದರಿ ಸಾಲದ ಬಾಬ್ತು ನಿಮ್ಮ ಖಾತೆ ಹೊಂದಿರುವ ಸಿಂಡಿಕೇಟ್ ಬ್ಯಾಂಕ್, ಮಡಿಕೇರಿ ಶಾಖೆಯ ಚೆಕ್ ನಂಃ**653447** ನ್ನು ರೂ.**2,50,000/–**ಗಳಿಗೆ ದಿಃ**22.02.2014** ಎಂದು ನಮೂದಿಸಿ ಪ್ರಾಸಾ-1 ರವರಿಗೆ ನೀಡಿದ್ದು ಸದರಿ ಚೆಕ್ಕನ್ನು ಪ್ರಾಸಾ-1 ರವರು ನಗದೀಕರಣ ಪಡಿಸಲು ತಮ್ಮ ಖಾತೆಯಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನಂಜನಗೂಡು ಶಾಖೆಗೆ ಹಾಜರುಪಡಿಸಿದಾಗ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ದಿಃ27.02.2014 ರಂದು ವಾಪಸ್ಸು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆ 4** ಪ್ರಾಸಾ-1 ರವರು ಮುಂದುವರೆದು ಅವರ ಪರ ವಕೀಲರ ಮೂಲಕ ದಿಃ**11.03.2014** ರಂದು ಕಾನೂನು ರೀತ್ಯಾ ನೋಟಿಸನ್ನು ನೀಡಿದ್ದು, ಸದರಿ ನೋಟೀಸ್ ಜಾರಿಯಾಗಿದ್ದು, ಈ ರೀತ್ಯಾ ನೀವು ಉತ್ತರವನ್ನು ನೀಡದೆ ಅಥವಾ ಹಣವನ್ನು ಮರುಪಾವತಿ ಮಾಡದೆ ಕಲಂ 138 ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ ಃ**

**ಪ್ರಶ್ನೆ 5** ಪ್ರಾಸಾ-1 ರವರು ಮುಂದುವರೆದು, ಆರೋಪಿಯಾದ ನೀವು ಪ್ರಾಸಾ1 ರವರಿಗೆ ನೀಡಿದ ಚೆಕ್ಕನ್ನು ನಿಪಿ-1 ಎಂದು, ಅದರಲ್ಲಿರುವ ತಮ್ಮ ಸಹಿಯನ್ನು ನಿಪಿ-1(ಎ) ಎಂದು, ದಿಃ**27.02.2014** ರಂದು ಬ್ಯಾಂಕಿಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ನೀಡಿದ ಹಿಂಬರಹವನ್ನು ನಿಪಿ-2 ರಂತೆ, ದಿಃ**01.03.2014** ರಂದು ವಕೀಲರ ಮೂಲಕ ಕಳುಹಿಸಿದ ನೋಟೀಸನ್ನು ನಿಪಿ-3 ರಂತೆ, ದಿಃ**10.04.2014** ರಂದು ಕಳುಹಿಸಿದ ಪ್ರತ್ಯುತ್ತರದ ನೋಟೀಸನ್ನು ನಿಪಿ-5 ಎಂದು, ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

**ಉತ್ತರ ಃ**

**ಪ್ರಶ್ನೆ 6ಃ** ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

**ಉತ್ತರ ಃ**

**ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ28.10.2021 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.**

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು
ಜೆ.ಎಮ್.ಎಫ್.ಸಿ.
ನಂಜನಗೂಡು